# ಈ ರಸ್ತೆ ಎಲ್ಲಿಗೆ ಹೋಗುತ್ತದೆ?

ಒಮ್ಮೆ ಭೋಜರಾಜ ಮಾಘಕವಿಯೊಡನೆ ವಿಹಾರಕ್ಕೆ ಹೋದನು. ಮಾತಿನ ಭರದಲ್ಲಿ ಉಜ್ಜಯಿನಿಯ ಗಡಿಯಿಂದ ಬಹುದೂರ ಬಂದುಬಿಟ್ಟಿದ್ದರು. ಹಿಂದಿರುಗುವಾಗ ದಾರಿ ತಪ್ಪಿಹೋಯಿತು.

ಬಹಳ ಸಮಯ ಅಲ್ಲಿ, ಇಲ್ಲಿ ಅಲೆದಾಡಿದ ನಂತರ ಒಂದು ಗುಡಿಸಲನ್ನು ಕಂಡರು. ಅದು ಓರ್ವ ವೃದ್ಧೆಯ ಮನೆ. ಅವಳನ್ನು ಕುರಿತು, 'ಅಮ್ಮಾ! ಈ ರಸ್ತೆ ಎಲ್ಲಿಗೆ ಹೋಗುತ್ತದೆ?' ಎಂದು ಕೇಳಿದರು.

